ಕಾರ್ಯಕ್ರಮ ಪಟ್ಟಿ ವಿಷಯ ಸಂಖ್ಯೆ: 6

ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು.
2025-2026ನೇ ಸಾಲಿನ ಬ್ಯಾಂಕಿನ ಆಡಳಿತ ಮಂಡಳಿ ವರದಿ

ಮಾನ್ಯ ಸಹಕಾರಿ ಬಂಧುಗಳೇ,
26ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ತಮ್ಮೆಲ್ಲರಿಗೂ ಆಡಳಿತ ಮಂಡಳಿಯ ಪರವಾಗಿ ಸ್ವಾಗತ ಬಯಸುತ್ತೇನೆ. ತಮ್ಮ ಮುಂದೆ ಬ್ಯಾಂಕಿನ ಲೆಕ್ಕಪರಿಶೋಧಕರ 2025-2026ನೇ ಸಾಲಿನ ಲಾಭ-ನಷ್ಟ, ಆಸ್ತಿ-ಜವಾಬ್ದಾರಿ ತ:ಖ್ತೆಗಳು ಹಾಗೂ ವರದಿಯನ್ನು ಮಂಡಿಸಿರುತ್ತೇವೆ. ವಿಷಯ ಸೂಚಿಯಂತೆ ಚರ್ಚಿಸಿ ತಮ್ಮ ಸಲಹೆ, ಸೂಚನೆ ಮತ್ತು ಮಾರ್ಗದರ್ಶನಗಳ ಮೂಲಕ ಅಂಗೀಕಾರ ನೀಡಬೇಕಾಗಿ ಕೋರುತ್ತೇವೆ.

26 ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರುವ ಬ್ಯಾಂಕ್, ತಮ್ಮೆಲ್ಲರ ಸಹಕಾರದಿಂದ ಪ್ರತಿ ವರ್ಷ ಪ್ರಗತಿಯ ಹಾದಿಯಲ್ಲಿ ಮುನ್ನೆಡೆಯುತ್ತಿದೆ. ಈ ಬಾರಿ ಬ್ಯಾಂಕಿನ ಬೆಳ್ಳಿಹಬ್ಬವನ್ನು ಅಕ್ಟೋಬರ್ 2025 ರ ಮಾಹಿಯಲ್ಲಿ ವಿಜೃಂಬಣೆಯಿಂದ ಆಚರಿಸಿದ್ದು ಈ ಹಬ್ಬಕ್ಕೆ ಆಗಿಮಿಸಿದಂತಹ ಎಲ್ಲಾ ಸದಸ್ಯರಿಗೂ ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ. ಬ್ಯಾಂಕಿನ ಒಟ್ಟಾರೆ ವ್ಯವಹಾರವು ಇಲ್ಲಿಯವರೆಗೆ 20244.45 ರೂಪಾಯಿಗಳಿಗೂ ಅಧಿಕವಾಗಿದ್ದು, ಕಳೆದ 13 ವರ್ಷಗಳಿಂದಲೂ ಆಡಿಟ್ ವರ್ಗೀಕರಣದಲ್ಲಿ 'ಎ' ಶ್ರೇಣಿಯನ್ನು ಮುಂದುವರಿಸಿಕೊಂಡು ಬಂದಿರುತ್ತದೆ. ಬ್ಯಾಂಕಿನ ಹಿತದೃಷ್ಟಿಯಿಂದ ಎಲ್ಲಾ ಶಾಖೆಗಳಿಗೂ ಸಿಸಿ ಟಿವಿ ಕ್ಯಾಮರ ಅಳವಡಿಸಲಾಗಿರುತ್ತದೆ. ಸದಸ್ಯರ ಮತ್ತು ಗ್ರಾಹಕರ ಅನುಕೂಲಕ್ಕಾಗಿ ಆರ್.ಟಿ.ಜಿ.ಎಸ್/ಎನ್.ಈ.ಎಫ್.ಟಿ ಸೌಲಭ್ಯವನ್ನು ಹಾಗೂ ಎಸ್.ಎಂ.ಎಸ್ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸಿಟಿಸಿವಿಲ್ ಕೋರ್ಟ್ ಶಾಖೆಯ ಆವರಣದಲ್ಲಿ ಬ್ಯಾಂಕಿನ ಸದಸ್ಯರಿಗೆ, ವಕೀಲರಿಗೆ ಹಾಗೂ ಗ್ರಾಹಕರಿಗೆ ಎಟಿಎಂ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈಗಾಗಲೇ ಸದಸ್ಯರ ಅನುಕೂಲಕ್ಕಾಗಿ ಐ.ಎಂ.ಪಿ.ಎಸ್, ಮೊಬೈಲ್ ಬ್ಯಾಂಕಿಗ್, ಯುಪಿಐ ಸೇವೆಗಳನ್ನು (ಗೂಗಲ್ ಪೇ ಹಾಗೂ ಫೋನ್ ಪೇ ಮತ್ತು ಪೇಟಿಯಂ) ಸೌಲಭ್ಯವನ್ನು ಕಲ್ಪಿಸಲಾಗಿದೆ. ಬ್ಯಾಂಕಿನ ಒಟ್ಟಾರೆ ಚಿತ್ರಣ ಆಶಾದಾಯಕವಾಗಿದ್ದು ಸದಸ್ಯರಿಗೆ ಹಾಗೂ ಗ್ರಾಹಕರಿಗೆ ತೃಪ್ತಿದಾಯಕ ಸೇವೆಯನ್ನು ನೀಡುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿರುತ್ತೇವೆ.

ವರದಿ ಸಾಲಿನಲ್ಲಿ ಪಾವತಿಯಾದ ಷೇರು ಬಂಡವಾಳ ರೂ.834.45 ಲಕ್ಷ ಗಳಿದ್ದು, ಆಪದ್ಧನ ಮತ್ತು ಇತರೆ ನಿಧಿಗಳು ರೂ.2148.39 ಲಕ್ಷಗಳಿದ್ದು ಠೇವಣಿಗಳು ರೂ.24924.21 ಲಕ್ಷ ಗಳಿದ್ದು, ಹೂಡಿಕೆಗಳು ರೂ.9077.53 ಲಕ್ಷಗಳಿದ್ದು, ಸಾಲ ಮತ್ತು ಮುಂಗಡಗಳು ರೂ.17738.82 ಲಕ್ಷಗಳಿದ್ದು, ದುಡಿಯುವ ಬಂಡವಾಳ ರೂ.29261.79 ಲಕ್ಷ ಗಳಿದ್ದು, ನಿವ್ವಳ ಲಾಭವು 383.53 ಲಕ್ಷ ಗಳಿದ್ದು, ನಮ್ಮ ಬ್ಯಾಂಕಿನಲ್ಲಿ ಠೇವಣಿ ಮಾಡಿರುವ ಪ್ರತಿಯೊಬ್ಬ ಠೇವಣಿದಾರರಿಗೆ ಒಟ್ಟು ರೂ.5.00 ಲಕ್ಷದ ಮೊತ್ತದವರೆಗೆ ಡಿಪಾಸಿಟ್ ಇನ್ಸೂರೆನ್ಸ್ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ ಮೂಲಕ ವಿಮೆ ಭದ್ರತೆ ಪಡೆಯಲಾಗಿರುತ್ತದೆ. ಹಿರಿಯ ನಾಗರೀಕರಿಗೆ ಠೇವಣಿ ಬಡ್ಡಿ ದರದಲ್ಲಿ ಶೇ.0.50 ರಷ್ಟು ಹೆಚ್ಚಿಗೆ ನೀಡುತ್ತಿದ್ದೇವೆ.

ಈಗಾಗಲೇ ಆರ್.ಬಿ.ಐ ಮಾನದಂಡದಂತೆ ನಮ್ಮ ಬ್ಯಾಂಕು ಕಳೆದ ಸಾಲುಗಳಿಂದ ಟೈರ್-1 ಶ್ರೇಣಿಯಿಂದ ಟೈರ್-2 ಶ್ರೇಣಿಗೆ ಬಂದಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಗೃಹ ಸಾಲದ ಮಿತಿಯು ರೂ.1.40ಕೋಟಿಗೆ, ಅಡಮಾನ ಸಾಲದ ಮಿತಿಯು ರೂ.2.5 ಕೋಟಿಗೆ, ವಾಹನ ಸಾಲದ ಮಿತಿಯು ರೂ.25 ಲಕ್ಷಕ್ಕೆ, ಹಾಗೂ ಗ್ರೂಪ್ ಹೌಸಿಂಗ್ ಸಾಲದ ಮಿತಿಯು ರೂ.4 ಕೋಟಿ ಹಾಗೂ ಎಲ್ಕ್ಟ್ರಿಕ್ ಕಾರುಗಳಿಗೆ ಎಕ್ಸ್ಷೋರಂ ದರದ ಮೇಲೆ ಶೇ.75%ರಷ್ಟು ಸಾಲವನ್ನು ನೀಡಲಾಗುವುದು ಎಂದು ತಮಗೆ ತಿಳಿಸಲು ಹರ್ಷ ಪಡುತ್ತೇವೆ ಸದಸ್ಯರ ಮತ್ತು ಗ್ರಾಹಕರ ಅನುಕೂಲಕ್ಕಾಗಿ ಲಾಕರ್ ಸೌಲಭ್ಯ, ದಿನನಿತ್ಯ ಠೇವಣಿ(ಪಿಗ್ಮಿ) ಸೌಲಭ್ಯಗಳನ್ನು ಒದಗಿಸಲಾಗಿದೆ.

2025-2026ರ ವರ್ಷಾಂತ್ಯಕ್ಕೆ ಬ್ಯಾಂಕಿನ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ನಿವ್ವಳ ಅನುತ್ಪಾದಕ ಆಸ್ತಿಗಳ ಪ್ರಮಾಣವನ್ನು **ಶೇ.-0.99** ಆಗಿರುತ್ತದೆ. ಈ ಪ್ರಮಾಣವನ್ನು ಮುಂದಿನ ಸಾಲುಗಳಲ್ಲಿಯೂ ಕೂಡ

ಮುಂದುವರಿಸುವ ಆಶಾಭಾವನೆ ಹೊಂದಿದ್ದೇವೆ. ಬ್ಯಾಂಕಿನ ಒಟ್ಟಾರೆ ಆದಾಯ ರೂ.2192.13 ಲಕ್ಷಗಳಿದ್ದು ಈ ಪೈಕಿ ಒಟ್ಟು ಎಲ್ಲಾ ರೀತಿಯ ಖರ್ಚು ರೂ.1808.60 ಲಕ್ಷ, ಬಾಕಿ ಜಾತಾ ನಿವ್ವಳ ರೂ.383.53 ಲಕ್ಷ ಲಾಭ ಗಳಿಸಿದೆ. ಸದರಿ ನಿವ್ವಳ ಲಾಭವನ್ನು ಸಹಕಾರ ಕಾಯಿದೆ, ಬ್ಯಾಂಕಿನ ಬೈಲಾಗಳನ್ನು ಅನುಸರಿಸಿ ಹಂಚಿಕೆ ಮಾಡಲು ತಮ್ಮ ಅನುಮೋದನೆಗಾಗಿ ಮಂಡಿಸಿದ್ದೇವೆ. ಸದರಿ ಶಿಫಾರಸ್ಸಿನಲ್ಲಿ ಬ್ಯಾಂಕಿನ ಪ್ರತಿ ಷೇರಿಗೆ ಶೇ.16 ರಂತೆ ಲಾಭಾಂಶ ಘೋಷಣೆಗೆ ಅವಕಾಶ ಮಾಡಲಾಗಿದೆ.

ಗುರಿ:

ಬ್ಯಾಂಕಿನ ಪ್ರಗತಿಗೆ ಗುರಿಯನ್ನು ಹಮ್ಮಿಕೊಳಲಾಗಿದೆ. ವಾರ್ಷಿಕ ಶೇಕಡ 10 ರಂತೆ ಠೇವಣಿಗಳನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. ಶೇಕಡ 15ಕ್ಕೆ ಕಡಿಮೆ ಇಲ್ಲದಂತೆ ಲಾಭಾಂಶ ಮುಂದಿನ ವರ್ಷಗಳಲ್ಲಿ ನೀಡಲು ಉದ್ದೇಶಿಸಲಾಗಿದೆ. ಸದಸ್ಯರಿಗೆ ಹೆಚ್ಚಿನ ಹಾಗೂ ನಿರಂತರ ಸೇವೆಗಳನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ಗುರಿಯನ್ನು ಹೊಂದಿದ್ದು, ಇದರ ಸಾಕಾರಕ್ಕೆ ತಮ್ಮ ಸಹಕಾರವನ್ನು ನಿರೀಕ್ಷಿಸುತ್ತೇವೆ. ಪ್ರಸಕ್ತ ವರ್ಷದಲ್ಲಿ ಬ್ಯಾಂಕಿನ ವತಿಯಿಂದ ಕೌಟುಂಬಿಕ ನ್ಯಾಯಾಲಯ ಮತ್ತು ಮೇಯೋಹಾಲ್ ವಿಭಾಗದಲ್ಲಿ ಶಾಖೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ ಹಾಗೂ ಸದಸ್ಯರ ಅನುಕೂಲಕ್ಕಾಗಿ ಹಾಲಿ ಇರುವ ಮ್ಯಾಜಿಸ್ಟೇಟ್ ಕೋರ್ಟಿನ ಶಾಖೆಯನ್ನು ನೂತನ ಕಟ್ಟಡದಲ್ಲಿ ಸ್ಥಳಾವಕಾಶ ನೀಡಿದ ಕೂಡಲೆ ಸ್ಥಳಾಂತರಿಸುವ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಅದೇ ರೀತಿ ಎಲ್ಲಾ ಸದಸ್ಯರಿಗೂ ಸ್ಮಾರ್ಟ್ ಕಾರ್ಡ್ ನೀಡುವ ಯೋಜನೆಯು ಈಗಾಗಲೇ ಕಾರ್ಯರೂಪದಲ್ಲಿದ್ದು ಸದ್ಯದಲ್ಲೇ ಸದಸ್ಯರಿಗೆ ಇದರ ಬಗ್ಗೆ ಮಾಹಿತಿಯನ್ನು ನೀಡಿ ಕಾರ್ಯರೂಪಕ್ಕೆ ತರಲು ಯೋಜಿಸಿದ್ದೇವೆ.

ಧನ್ಯವಾದ ಸಮರ್ಪಣೆ:

ನ್ಯಾಯಮಿತ್ರ ಸಹಕಾರಿ ಬ್ಯಾಂಕಿಗೆ ಅಗತ್ಯವಾದ ಸ್ಥಳಾವಕಾಶವನ್ನು ಒದಗಿಸಿಕೊಟ್ಟಿರುವ ಉಚ್ಚ ನ್ಯಾಯಾಲಯದ ಸರ್ವರಿಗೂ ಮತ್ತು ಇದಕ್ಕೆ ಸಹಕರಿಸಿದ ವಕೀಲರ ಸಂಘ, ವಕೀಲರ ಸಹಕಾರ ಸಂಘ ಮತ್ತು ಕಟ್ಟಡ ಸಮಿತಿಯ ಪಧಾಧಿಕಾರಿಗಳಿಗೆ ನಮ್ಮ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಕ.ರಾ. ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದವರಿಗೂ, ಲೆಕ್ಕ ಪರಿಶೋಧನೆ ಕಾರ್ಯವನ್ನು ಸಕಾಲದಲ್ಲಿ ನಡೆಸಿಕೊಟ್ಟ ಮೇ: ಬಿ,ಎಂ.ಎಂ.ಎಸ್ ಅಂಡ್ ಕೋ ಬೆಂಗಳೂರು ಇವರಿಗೂ, ಬ್ಯಾಂಕಿನ ದಿನವಹಿ ಲೆಕ್ಕಪರಿಶೋಧನೆ ನಡಿಸಿ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿರುವ ಮೇ.ಅಳವಂಡಿ ಅಸೋಸಿಯೆಟ್ಸ್, ಬೆಂಗಳೂರು ಬ್ಯಾಂಕಿನ ಆದಾಯತೆರಿಗೆ, ಟಿ.ಡಿ.ಎಸ್ ರಿಟರ್ನ್ ನಡೆಸಿ ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಮೇ.ವಾಸನ್ ಅಸೋಸಿಯೆಟ್ಸ್, ಬೆಂಗಳೂರು ಇವರಿಗೂ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನವರಿಗೂ, ಭಾರತೀಯ ರಿಸರ್ವ್ ಬ್ಯಾಂಕಿನವರಿಗೂ, ಸಕಾಲದಲ್ಲಿ ಬ್ಯಾಂಕಿಗೆ ಸಾಲಕ್ಕೆ ಅರ್ಜಿಸಲ್ಲಿಸಿದ ಅರ್ಜಿದಾರರ ಸಾಲದ ಅರ್ಜಿಗಳ ಕಾನೂನು ವರದಿಯನ್ನು ನೀಡಿದ ಬ್ಯಾಂಕಿನ ಕಾನೂನು ಸಲಹೆಗಾರರಿಗೂ ಹಾಗೂ ಸಾಲದ ಅರ್ಜಿಗಳಿಗೆ ಮೌಲ್ಯಮಾಪನದ ವರದಿಯನ್ನು ನೀಡಿದ ಬ್ಯಾಂಕಿನ ಮೌಲ್ಯಮಾಪಕರಿಗೂ, ಸದಸ್ಯರಿಗೂ, ಠೇವಣಿದಾರರಿಗೂ, ಗ್ರಾಹಕರಿಗೂ ಹಾಗೂ ಸಾಲಗಾರರಿಗೂ ಈ ಮೂಲಕ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಬ್ಯಾಂಕಿನ ಸಮಗ್ರ ಮುನ್ನಡೆಯಲ್ಲಿ ಸಹಕರಿಸುತ್ತಿರುವ ಎಲ್ಲಾ ವಕೀಲರ ಸಂಸ್ಥೆಗಳ ಪದಾಧಿಕಾರಿಗಳಿಗೂ ಬ್ಯಾಂಕಿನ ಬೆಳವಣಿಗೆಗೆ ಶ್ರಮಿಸುತ್ತಿರುವ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೂ ಅಭಿನಂದಿಸುತ್ತೇವೆ. ಒಟ್ಟಾರೆ ಬ್ಯಾಂಕಿನ ಕಾರ್ಯ ಚಟುವಟಿಕೆಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಹಾಗೂ ಸಹಕರಿಸುತ್ತಿರುವ ಸಮಸ್ತರಿಗೂ ಆಡಳಿತ ಮಂಡಳಿ ಪರವಾಗಿ ಹಾಗೂ ವೈಯಕ್ತಿಕವಾಗಿ ಧನ್ಯವಾದಗಳನ್ನು ಈ ಮೂಲಕ ಅರ್ಪಿಸುತ್ತೇವೆ.

ವಂದನೆಗಳೊಂದಿಗೆ,

(ಶ್ರೀನಿವಾಸ.ಎಸ್.ಬಿ)
ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು